ಸಿದ್ಧಾಂತ ಮಾಡಿ ಕೊಂಡಿದ್ದಾರೆ. ರಾಜ್ಯದ ಹಿತದೃಷ್ಟಿಯಿಂದ ಅವರುಹೇಳಬೇಕಾದದ್ದು ಹೇಳಿದ್ದಾರೆ. ಇದು ಸದನದ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ:- ಮಾನ್ಯ ಅಧ್ಯಕ್ಷರೇ, ತಮಿಳುನಾಡಿನಲ್ಲಿ 7 ಜನರಿಗೆ ಕೊಟ್ಟಿದ್ದಾರೆ. ನಮ್ಮಲ್ಲಿ ಕೇವಲ 3 ಜನರಿಗೆ ಕೊಟ್ಟಿದ್ದಾರೆ. ಇವತ್ತು ಕರ್ನಾಟಕ, ತಮಿಳುನಾಡಿನಲ್ಲಿ ಏನು ಪರಿಸ್ಥಿತಿ ಇದೆ ಗೊತ್ತು. ನಮ್ಮಲ್ಲೂ 7 ಜನ ಇದ್ದರೆ ಸರಿಸಮಾನವಾಗಿ ಹೋರಾಟ ಮಾಡುವುದಕ್ಕಾಗುತ್ತದೆ ಎಂದು ಹೇಳುವುದರಲ್ಲಿ ಅರ್ಥ ಇದೆ. ಇನ್ನು ಮುಂದೆ ಮಂತ್ರಿ ಮಂಡಲವನ್ನು ವಿಸ್ತರಣೆ ಮಾಡುವವರು ಇದ್ದಾರೆ. ಸನ್ಮಾನ್ಯ ವಾಜಪೇಯಿಯವರು ಇದನ್ನು ಗಮನಿಸಿ. ನಾವೆಲ್ಲರೂ ಅಭಿನಂದನೆ ಸಲ್ಲಿಸೋಣ. ಇನ್ನು ಹೆಚ್ಚು ಪ್ರಾತಿನಿಧ್ಯ ಕೊಡಬೇಕು ಎಂದು ಕೇಳೋಣ. ಕೇಳುವುದರಲ್ಲಿ ತಪ್ಪೇನು ಇಲ್ಲ.

Mr. Speaker:- It is the exclusive prerogative of the Prime Minister of this country to expand or not to expand, tohave any number of Ministers he likes in his cabinet. It is beyond the purview of this house, I am sorry, I will not venture into such things.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ವಾಟಾಳ್‌ರು ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಮ್ಮೆಲ್ಲರದೂ ಸಮ್ಮತಿ ಇದೆ. ದಯಮಾಡಿ ಕೇಂದ್ರ ಸರ್ಕಾರದಲ್ಲಿ ಒಳ್ಳೆಯಪಾಲು ಸಿಗಬೇಕು ಎನ್ನುವುದರಲ್ಲಿ ಯಾರದೂ ಭಿನ್ನಾಭಿಪ್ರಾಯಗಳಿಲ್ಲ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ವಾಟಾಳ್‌ರು ಈ ಪ್ರಶ್ನೆ ಎತ್ತಿದ್ದಾರೆ. ಮಾನ್ಯ ಸಭಾಧ್ಯಕ್ಷರು ಈ ಸದನ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ವಾಟಾಳ್ ನಾಗರಾಜ್‌ರವರ ನೇತೃತ್ವದಲ್ಲಿ ಎಲ್ಲಾ ಬಿಜೆಪಿ ಮತ್ತು ಲೋಕಶಕ್ತಿಯಲ್ಲಿರುವ ಜನರು ವಾಜಪೇಯಿಯವರನ್ನು ಭೇಟಿಮಾಡಲಿಕ್ಕೆ ಹೋದರೆ ಬಹಳ ಒಳ್ಳೆಯದು.

ಶ್ರೀ ಅರಗ ಜ್ಞಾನೇಂದ್ರ:- ಅದರಲ್ಲಿ ಪಟೇಲರು, ನಾಣಯ್ಯನವರು ಇದ್ದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್:- ನಮಗೆ ಪ್ರಾತಿನಿಧ್ಯ ಜಾಸ್ತಿ ಕೊಟ್ಟಿಲ್ಲ. ತಮಿಳುನಾಡಿಗೆ ಕೊಟ್ಟಿರುವುದು ಸರಿಯಲ್ಲ. ನಮಗೆ ಕೊಡಬೇಕು ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಕೆ.ಎಸ್. ಈಶ್ವರಪ್ಪ :- ಇದು ಸಭಾತ್ಯಾಗ ಮಾಡುವ ಒಂದು ನಾಟಕ. ಇದು ಪ್ರಚಾರಕ್ಕೆ ತೆಗೆದುಕೊಂಡಂಥ ಪ್ರಯತ್ನ ಇವರಿಗೆ ಕಳಕಳಿ ಇಲ್ಲ. ರಾಜ್ಯಕ್ಕೆ ಹೆಚ್ಚು ಕೊಡ ಬೇಕು ಎನ್ನುವುದಲ್ಲ. ಪ್ರಚಾರ ಮಾಡುವ ಒಂದು ಕುತಂತ್ರ. ಈ ರೀತಿ ಪ್ರಚಾರ ಮಾಡುವುದು ಸರಿಯಲ್ಲ. ಇದರೆ ಬಗ್ಗೆ ನಿರ್ಣಯ ಮಾಡಬೇಕಿತ್ತು. ಪ್ರಚಾರ ಮಾಡಿಕೊಂಡು ಸಭಾತ್ಯಾಗ ಮಾಡುವಂಥ ಒಂದು ಡ್ರಾಮ ಮಾಡುತ್ತಿದ್ದಾರೆ, ಇದನ್ನು ನಾನು ಖಂಡನೆ ಮಾಡುತ್ತಿದ್ದೇನೆ. ಇದು ಒಳ್ಳೆಯದಲ್ಲ.